# ಎನ್ಐಟಿಕೆಯಿಂದ ಯೂನಿಟಿ ರನ್




ಎನ್ಐಟಿಕೆ ವತಿಯಿಂದ ಸೋಮವಾರ ಯೂನಿಟಿ ರನ್ ನಡೆಯಿತು

**ಮಂಗಳೂರು:** ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ 147ನೇ ಜನ್ಮದಿನದ ಹಿನ್ನೆಲೆಯಲ್ಲಿ ಎನ್ಐಟಿಕೆ ಸುರತ್ಕಲ್ ವತಿಯಿಂದ ಸೋಮವಾರ ಬೆಳಗ್ಗೆ ಯೂನಿಟಿ ರನ್ ಆಯೋಜಿಸಲಾಗಿತ್ತು.

ಎನ್ಐಟಿಕೆ ನಿರ್ದೇಶಕ (ಪ್ರಭಾರ) ಪ್ರೊ.ಜಿ.ಸಿ ಮೋಹನ್ ಕುಮಾರ್, ರಿಜಿಸ್ಟ್ರಾರ್ ರವೀಂದ್ರನಾಥ್, ವಿದ್ಯಾರ್ಥಿ ಕಲ್ಯಾಣ ಡೀನ್ ಪ್ರೊ. ನರೇಂದ್ರನಾಥ್, ಎನ್‌ಸಿಸಿ ಅಧಿಕಾರಿಗಳು ಮತ್ತು ಕೆಡೆಟ್‌ಗಳು, ಎನ್‌ಎಸ್‌ಎಸ್ ಅಧಿಕಾರಿಗಳು ಮತ್ತು ಸ್ವಯಂಸೇವಕರನ್ನು ಒಳಗೊಂಡ ಎನ್‌ಎಸ್‌ಎಸ್ ಘಟಕ, ಬೋಧನೆ ಮತ್ತು ಬೋಧಕೇತರರೊಂದಿಗೆ 300 ಕ್ಕೂ ಹೆಚ್ಚು ವಿದ್ಯಾರ್ಥಿಗಳು 6 ಕಿ.ಮೀ.ಗೂ ಹೆಚ್ಚು ದೂರದ ಏಕತಾ ಓಟದಲ್ಲಿ ಭಾಗವಹಿಸಿದ್ದರು.

ಸರ್ದಾರ್ ವಲ್ಲಭಭಾಯಿ ಪಟೇಲ್ ಹಾಗೂ ದೇಶಕ್ಕೆ ಅವರು ನೀಡಿದ ಕೊಡುಗೆಗಳ ಕುರಿತು ಪ್ರದರ್ಶನವನ್ನು ಎನ್ಐಟಿಕೆ ವಜ್ರಮಹೋತ್ಸವದ ಪ್ರದರ್ಶನ ಸಭಾಂಗಣದಲ್ಲಿ ನಡೆಸಲಾಯಿತು.

Hosa Diganta, Date:01/11/22, p, no - 09